ಭೂಮಿಯಮ್ಮನೂ, ಅಲ್ಲಿರುವ ಜೀವರಾಶಿಗಳೂ ಮಳೆಗಾಗಿ ಕಾದಿರುವ ಕತೆಯನ್ನು ಈ ಚಿಟ್ಟೆ ಸಂಕುಲ ಬಗೆಬಗೆಯಾಗಿ ವರ್ಣಿಸುತ್ತವೆ. ಆ ವರ್ಣನೆ ಕೇಳುವಾಗ ಮಳೆಮಾಯಿಗೆ ಪುಳಕ. ದನವೊಂದು ಕರುವಿಗೆ ಕೆಚ್ಚಲಿಳಿಸುವಾಗ ಉಂಟಾಗುವ ವಾತ್ಸಲ್ಯದ ಪುಳಕ. ವರ್ಷವಿಡೀ ಆಸ್ಥೆಯಿಂದ ಸಿದ್ಧಪಡಿಸಿದ ಬಿಳಿಮೋಡಗಳು ಆ ರಾಗಕ್ಕೆ ರಂಗೇರಿ ಹೆಪ್ಪು ದಟ್ಟವಾಗಿ ಕಪ್ಪುಗಟ್ಟಲಾರಂಭಿಸುತ್ತವೆ... ಮೊಟ್ಟೆಯೊಂದು ಕಾವು ಪಡೆದು ಪಕ್ವವಾಗುವಂತೆ ಹನಿಗಳ ಪ್ರಸವೋತ್ಸವ ನಡೆಯುತ್ತದೆ.

ಆದರೆ ಇತ್ತೀಚೆಗೆ ಹಾಡುಗಳೇ ನೀರಸವಾಗಿವೆಯಲ್ಲಾ... ಚಿಟ್ಟೆಗಳು ಹೇಳುವ ಕತೆಗಳು ನೀರಸ. ರಾಗವೂ ರಸಹೀನ. ಭೂಮಿಯಲ್ಲಿ ಮಳೆ ಬೇಡ ಎನ್ನುವ ಜನರ ಕತೆಗಳೇ ಕತೆಗಳು. ಅದಕ್ಕೆ ಹಚ್ಚಿದ ರಾಗವೋ ಮಳೆಮಾಯಿಯ ಮನಸ್ಸನ್ನೇ ಮುದುಡಿಸುತ್ತಿದೆ. ಅವಳು ಬೇಸರಗೊಂಡಿದ್ದಾಳೆ. ಬಿಳಿಮೋಡಗಳು ಪಕ್ವವಾಗುವುದೇ ಇಲ್ಲ. ಹೇಗೋ ಏನೋ ಭೂಮಿಗೆ ತೆರಳಿದ ಕೆಲವೇ ಹನಿಗಳೂ ಎತ್ತ ಹೋಗಲಿ, ಏನು ಮಾಡಲಿ ಎಂಬ ಅರಿವಾಗದೇ ತಾಯಿ ಹಸುವನ್ನು ಕಾಣದೆ ಕಂಗಾಲಾದ ಕರುವಿನಂತಾಗಿವೆ.

ಮಳೆಹನಿಯ ಅಳುವ
ಕೇಳುವರಾರು...

ಎಂದು ಚಿಟ್ಟೆಗಳು ಸೇರಿ ಅಳುತ ಹಾಡುತಿವೆ. ಮಳೆಮಾಯಿ ಕುಳಿತು ಆಲಿಸುತ್ತಿದ್ದಾಳೆ. ಕಪ್ಪುಗಟ್ಟಬೇಕಾದ ಮೋಡಗಳು ಈ ಬೇಸರದ ಹಾಡ ಕೇಳಿ ಮತ್ತಷ್ಟು ಹಗುರಾಗಿ ಆಕಾಶದಲ್ಲಿ ಮೇಲ ಮೇಲಕ್ಕೇರುತ್ತಿವೆ. ತುಂಬು ಸೌಂದರ್ಯದಿಂದ ರಂಗೇರಬೇಕಾದ ಮಳೆಮಾಯಿ ಮುಖ

